# ಪ್ರವಾದಿಚರ್ಯೆಯ ಬಗ್ಗೆ ಅಕ್ಲಾನಿಗಳ ನಿಲುವು

موقف العقلانيين من سنة الرسول صلى الله عليه سلم

< الكنادي >

ಶೈಖ್ ಸಾಲಿಹ್ ಅಲ್‌ಫೌಝಾನ್

الشيخ صالح الفوزان

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಅಬ್ದುಸ್ಸಲಾಂ ಕಾಟಿಪಳ್ಳ

**ترجمة: محمد حمزة البتوري**

**مراجعة: عبد السلام كاتيبلا**

# ಪ್ರವಾದಿಚರ್ಯೆಯ ಬಗ್ಗೆ ಅಕ್ಲಾನಿಗಳ ನಿಲುವು

ಅಲ್ಲಾಹು ಮುಹಮ್ಮದ್(ﷺ)ರವರನ್ನು ಮಾರ್ಗದರ್ಶನ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದನು. ಬಹುದೇವ ವಿಶ್ವಾಸಿಗಳು ಎಷ್ಟೇ ಅಸಹ್ಯಪಟ್ಟರೂ ಆ ಧರ್ಮವು ಇತರೆಲ್ಲ ಧರ್ಮಗಳ ಮೇಲೆ ವಿಜಯಗಳಿಸುವಂತೆ ಮಾಡುವೆನೆಂದು ಅವನು ವಾಗ್ದಾನ ಮಾಡಿದನು. ಪ್ರವಾದಿ ಮುಹಮ್ಮದ್(ﷺ)ರವರು ಜನರನ್ನು ಆ ಧರ್ಮದ ಕಡೆಗೆ ಕರೆದರು. ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಿದರು. ಅವರ ಸಹಾಬಾಗಳು ಅವರಿಗೆ ಶಕ್ತಿಯನ್ನು ಬೆಂಬಲವನ್ನು ನೀಡಿದರು. ಕೊನೆಗೆ ಅಲ್ಲಾಹನ ವಾಗ್ದಾನದಂತೆ ಇಸ್ಲಾಂ ಧರ್ಮವು ಇತರೆಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಿತು.

ಪ್ರವಾದಿ(ﷺ)ರವರ ಮರಣಾನಂತರ ಅಲ್‌ಖುಲಫಾಉ ರ್‍ರಾಶಿದೂನ್‌ಗಳು ಮತ್ತು ಅವರ ಬಳಿಕ ಇತರ ಖಲೀಫರು ಜನರನ್ನು ಧರ್ಮದ ಕಡೆಗೆ ಕರೆಯುವುದನ್ನು ಮತ್ತು ಅಲ್ಲಾಹನ ಮಾರ್ಗದಲ್ಲಿರುವ ಹೋರಾಟವನ್ನು ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲೆಲ್ಲ ಮುಂದುವರಿಸಿದರು. ಇಸ್ಲಾಂ ವ್ಯಾಪಕವಾಗಿ ಹರಡಿಕೊಂಡಿತು. ಅವಿಶ್ವಾಸಕ್ಕೆ ತಡೆಯುಂಟಾಯಿತು. ಜನರು ಯಾವುದೇ ಬಲಾತ್ಕಾರವೋ, ಬಲವಂತವೋ ಇಲ್ಲದೆ, ಸ್ವಇಚ್ಛೆಯಿಂದಲೇ ತಂಡೋಪತಂಡವಾಗಿ ಅಲ್ಲಾಹನ ಧರ್ಮಕ್ಕೆ ಪ್ರವೇಶಿಸಿದರು. ಅವಿಶ್ವಾಸದಲ್ಲೇ ಹಟತೊಟ್ಟು ಕುಳಿತವರು ನಿಂದ್ಯರಾಗಿ ಜಿಝ್ಯಃ ಕೊಡುವ ಮೂಲಕ ಇಸ್ಲಾಮೀ ಆಡಳಿತದ ಅಡಿಯಲ್ಲಿ ಜೀವಿಸತೊಡಗಿದರು.

ಇಲ್ಲಿ ಮೂರನೇ ಪಂಗಡವಿತ್ತು. ಅವರು ತೋರಿಕೆಗಾಗಿ ಮತ್ತು ಮುಸ್ಲಿಮರ ಮಧ್ಯೆ ಬದುಕುವುದಕ್ಕಾಗಿ ಇಸ್ಲಾಂ ಧರ್ಮ ಸ್ವೀಕರಿಸಿದರು. ಅವರು ಬಾಹ್ಯದಲ್ಲಿ ಮುಸ್ಲಿಮರಾಗಿದ್ದರೂ ಆಂತರ್ಯದಲ್ಲಿ ಅವಿಶ್ವಾಸಿಗಳಾಗಿದ್ದರು. ಅವರೇ ಮುನಾಫಿಕ್‌ಗಳು.

﴿ مُّذَبۡذَبِينَ بَيۡنَ ذَٰلِكَ لَآ إِلَىٰ هَٰٓؤُلَآءِ وَلَآ إِلَىٰ هَٰٓؤُلَآءِۚ ﴾ [النساء : ١٤٣]

*“ಅವರು ಮಧ್ಯಭಾಗದಲ್ಲಿ ಅತ್ತಿತ್ತ ಓಲಾಡುತ್ತಿರುವವರು. ಇವರ ಕಡೆಗೂ ಅಲ್ಲ, ಅವರ ಕಡೆಗೂ ಅಲ್ಲ.”* [ಅನ್ನಿಸಾಅ್ 143]

ಅವರು ಕಡು ಅವಿಶ್ವಾಸಿಗಳಿಗಿಂತಲೂ ನೀಚ ಸ್ಥಿತಿಯಲ್ಲಿರುವವರು. ಅವರ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿ هُمُ ٱلۡعَدُوُّ فَٱحۡذَرۡهُمۡۚ قَٰتَلَهُمُ ٱللَّهُۖ أَنَّىٰ يُؤۡفَكُونَ ٤ ﴾ [المنافقون : ٤]

*“ಅವರೇ ಶತ್ರುಗಳು. ಅವರ ಬಗ್ಗೆ ಎಚ್ಚರವಾಗಿರಿ. ಅಲ್ಲಾಹು ಅವರನ್ನು ನಾಶ ಮಾಡಲಿ. ಅವರು ಹೇಗೆ ವಿಚಲಿತಗೊಳಿಸಲ್ಪಡುತ್ತಿದ್ದಾರೆ.”* [ಅಲ್‌ಮುನಾಫಿಕೂನ್ 4]

ಅವರು ಆಂತರಿಕ ಶತ್ರುಗಳು. ಅವರು ಬಾಹ್ಯ ಶತ್ರುಗಳಿಗಿಂತಲೂ ಕೆಟ್ಟವರು. ಅಲ್ಲಾಹು ಅನೇಕ ಆಯತ್‌ಗಳ ಮೂಲಕ ಅವರ ಮುಖವಾಡವನ್ನು ಕಳಚಿ ಅವರ ನಿಜಸ್ಥಿತಿಯನ್ನು ಅನಾವರಣ ಗೊಳಿಸಿದ್ದಾನೆ. ಈ ಆಯತ್‌ಗಳನ್ನು ಅಂತ್ಯದಿನದ ತನಕ ಪಾರಾಯಣ ಮಾಡಲಾಗುತ್ತಿದೆ.

ನಮ್ಮ ಈ ಕಾಲಘಟ್ಟದಲ್ಲಿ ಅವರ ಉತ್ತರಾಧಿಕಾರಿಗಳಾಗಿ ಬಂದ ಅನೇಕ ಗುಂಪುಗಳಿವೆ. ಅವರು ತಮ್ಮ ಗುರಿಗಳಲ್ಲೂ, ಸಂಸ್ಕೃತಿಗಳಲ್ಲೂ ಮಾತ್ರವಲ್ಲದೆ, ಇಸ್ಲಾಮ್ ಧರ್ಮದ ಮೇಲೆ ತಮಗಿರುವ ಶತ್ರುತ್ವದಲ್ಲೂ ಮುನಾಫಿಕ್‌ಗಳನ್ನು ಅನುಕರಿಸುತ್ತಿದ್ದಾರೆ. ಇಸ್ಲಾಂ ಧರ್ಮಕ್ಕೆ ನಿಷ್ಠವಾಗಿ ಜೀವಿಸುವ ಮುಸಲ್ಮಾನರನ್ನು ತೀವ್ರವಾದಿಗಳೆಂದು, ಮೂಲಭೂತವಾದಿಗಳೆಂದು ಕರೆಯುತ್ತಾರೆ. ಇಸ್ಲಾಂ ಧರ್ಮದ ಗಂಧಗಾಳಿಯಿಲ್ಲದ, ಇಸ್ಲಾಂ ಕಲಿಸಿದಂತೆ ಜೀವಿಸದ ಮುಸಲ್ಮಾನರನ್ನು ಪ್ರಗತಿಪರರು, ಉದ್ಧಾರಕರು ಎನ್ನುತ್ತಾರೆ.

ಇದೇ ಅಡಿಪಾಯದಲ್ಲಿ ಅವರು ಇಸ್ಲಾಂ ಧರ್ಮಕ್ಕಾಗಿ ಹಗಲಿರುಳೆನ್ನದೆ ದುಡಿದ ಉಲಮಾಗಳನ್ನು ಮತ್ತು ಇಮಾಂಗಳನ್ನು ಅಭಿವೃದ್ಧಿಯ ತಡೆಗಳೆಂದು, ಸಂಕೋಲೆಗಳೆಂದು ಮತ್ತು ಪಾದ್ರಿಗಳೆಂದು ಹೀಯಾಳಿಸುತ್ತಾರೆ. ತಮ್ಮ ಆಲೋಚನಾ ಶಕ್ತಿಯ ಆಧಾರದಲ್ಲಿ ತಾವೇ ಸ್ವತಃ ರಚಿಸಿದ ಕರ್ಮಶಾಸ್ತ್ರದ ಕಡೆಗೆ ಜನರನ್ನು ಕರೆಯುತ್ತಾರೆ. ಮಾತ್ರವಲ್ಲ, ತಮ್ಮ ಹುಚ್ಚು ಧೈರ್ಯದಿಂದ ಸಹೀಹಾದ ಹದೀಸ್‌ಗಳನ್ನು ಕೂಡ ತಿರಸ್ಕರಿಸುತ್ತಿದ್ದಾರೆ. ಇದಕ್ಕೆ ಕಾರಣ ಇವರ ಪ್ರಕಾರ ಹದೀಸ್‌ಗಳು ಬುದ್ಧಿಗೆ ವಿರುದ್ಧವಂತೆ! ಇವರು ಹೇಳುವ ಈ ಬುದ್ಧಿ ಯಾವುದು? ಅದು ಅವರ ಅಪಕ್ವ, ಮಾಲಿನ್ಯಪೂರಿತ ಬುದ್ಧಿಯಾಗಿದೆಯೇ ವಿನಾ ಆರೋಗ್ಯವಂತ ಬುದ್ಧಿಯಲ್ಲ. ಕಾರಣ, ಆರೋಗ್ಯವಂತ ಬುದ್ಧಿ ಸಹೀಹಾದ ಹದೀಸ್‌ಗಳಿಗೆ ವಿರುದ್ಧವಾಗುವುದಿಲ್ಲ. ಶೈಖುಲ್ ಇಸ್ಲಾಂ ಇಬ್ನ್ ತೈಮಿಯ್ಯಃ(ﷺ) ಹೇಳಿದಂತೆ:

الْعَقْلُ الصَّرِيحُ لَا يُخَالِفُ النَّقْلَ الصَّحِيحَ، فَإِنِ اخْتَلَفَا فإِمَّا أَنَّ الْعَقْلَ غَيْرُ صَرِيحٍ وَإِمَّا أَنَّ النَّقْلَ غَيْرُ صَحِيحٍ.

*“ಸಂಶಯರಹಿತ ಬುದ್ಧಿಯು ಸಹೀಹಾದ ಹದೀಸ್‌ಗಳಿಗೆ ವಿರುದ್ಧವಾಗುವುದಿಲ್ಲ. ಒಂದು ವೇಳೆ ವಿರುದ್ಧವಾದರೆ ಒಂದೋ ಬುದ್ಧಿ ಕೆಟ್ಟಿರಬೇಕು ಅಥವಾ ಹದೀಸ್ ದುರ್ಬಲವಾಗಿರಬೇಕು”.*

ಶರೀಅತ್ತಿನಲ್ಲಿ ಬಂದಿರುವ ಎಲ್ಲವನ್ನೂ ಗ್ರಹಿಸಲು ಬುದ್ಧಿಗೆ ಸಾಧ್ಯವಾಗಬೇಕೆಂದಿಲ್ಲ. ಶರೀಅತ್ತಿನಲ್ಲಿ ಕೆಲವು ವಿಷಯಗಳಿವೆ. ಅವುಗಳನ್ನು ಗ್ರಹಿಸಲು ಮನುಷ್ಯ ಬುದ್ಧಿಗೆ ಸಾಧ್ಯವಿಲ್ಲ. ಅಂತಹ ವಿಷಯಗಳನ್ನು ಒಪ್ಪಿಕೊಂಡು ಅದರ ಬಗ್ಗೆ ಅನ್ವೇಷಣೆ ಮಾಡದಿರುವುದು ನಮ್ಮ ಕರ್ತವ್ಯ. ಅಮೀರುಲ್ ಮುಅ್‌ಮಿನೀನ್ ಉಮರ್ ಇಬ್ನುಲ್ ಖತ್ತಾಬ್(ﷺ) ಹೇಳುತ್ತಾರೆ:

يَا أَيُّهَا النَّاسُ، اتَّهِمُوا الرَّأْيَ فِي الدِّينِ، فَلَوْ رَأَيْتُنِي يَوْمَ أَبِي جَنْدَلٍ أَنْ أَرُدَّ أَمْرَ رَسُولِ اللَّهِ صَلَّى اللَّهُ عَلَيْهِ وَسَلَّمَ اجْتِهَادًا وَلَا آلُو عَنِ الْحَقِّ.

*"ಓ ಜನರೇ! ಧರ್ಮದ ವಿಷಯದಲ್ಲಿರುವ ಅಭಿಪ್ರಾಯಗಳನ್ನು ಆಕ್ಷೇಪಿಸಿರಿ. ಅಬೂ ಜಂದಲ್‌ನ ದಿನ ಪ್ರವಾದಿ(ﷺ)ರವರ ಆಜ್ಞೆಯನ್ನು ನನ್ನ ಇಜ್ತಿಹಾದಿನ ಮೂಲಕ ತಿರಸ್ಕರಿಸಲು ನಾನು ಅಭಿಪ್ರಾಯಪಟ್ಟಿದ್ದರೆ ನಾನು ತಿರಸ್ಕರಿಸುತ್ತಿದ್ದೆ. ನಾನು ಸತ್ಯದಿಂದ ತಿರುಗಿ ನಡೆಯುವವನಲ್ಲ".*

ಅಬೂ ಜಂದಲ್‌ನ ದಿನ ಎಂದರೆ ಹುದೈಬಿಯಾ ಒಪ್ಪಂದ ನಡೆದ ದಿನ. ಒಪ್ಪಂದದ ನಿಯಮಗಳ ಪ್ರಕಾರ ಪ್ರವಾದಿ(ﷺ)ರವರು ಅಬೂ ಜಂದಲ್‌ರನ್ನು ಮುಶ್ರಿಕರಿಗೆ ಬಿಟ್ಟುಕೊಟ್ಟರು. ಇದು ಉಮರ್(ؓ)ರಿಗೆ ಸಹಿಸಲಾಗಲಿಲ್ಲ. ಆದರೆ ಈ ಒಪ್ಪಂದದ ಕಾರಣ, ಮುಸ್ಲಿಮರಿಗೆ ಬಹುದೊಡ್ಡ ವಿಜಯ ಸಾಧಿಸಲು ಸಾಧ್ಯವಾಯಿತು.

ಅಮೀರುಲ್ ಮುಅ್‌ಮಿನೀನ್ ಅಲೀ ಇಬ್ನ್ ಅಬೂ ತಾಲಿಬ್(ؓ) ಹೇಳುತ್ತಾರೆ:

لَوْ كَانَ الدِّينُ بِالرَّأْيِ لَكَانَ أَسَفَلُ الْخُفِّ أَوْلَى بِالْمَسْحِ مِنْ أَعْلَاهُ.

*"ಒಂದು ವೇಳೆ ಧರ್ಮವು ಅಭಿಪ್ರಾಯಗಳ ಆಧಾರದಲ್ಲಿರುತ್ತಿದ್ದರೆ, ಪಾದರಕ್ಷೆಯ ಮೇಲ್ಭಾಗಕ್ಕಿಂತಲೂ ಅಡಿಭಾಗವನ್ನು ಸವರುವುದು ಹೆಚ್ಚು ಯೋಗ್ಯವಾಗಿರುತ್ತಿತ್ತು".*

ಧರ್ಮವನ್ನು ಸ್ವತಂತ್ರವಾಗಿ ಅರ್ಥಮಾಡಿಕೊಳ್ಳಲು, ಮನುಷ್ಯರಿಗೆ ಸಂಬಂಧಿಸಿದಂತೆ ಒಳಿತು ಯಾವುದು, ಕೆಡುಕು ಯಾವುದು ಎನ್ನುವುದನ್ನು ಸ್ವತಂತ್ರವಾಗಿ ನಿರ್ಣಯಿಸಲು ಮನುಷ್ಯ ಬುದ್ಧಿಗೆ ಸಾಧ್ಯವಿರುತ್ತಿದ್ದರೆ ಶರೀಅತ್ತಿನ ಆವಶ್ಯಕತೆಯೇ ಇರುತ್ತಿರಲಿಲ್ಲ. ಕುರ್‌ಆನ್ ಮತ್ತು ಸುನ್ನತ್ತಿನ ಅಗತ್ಯವಿರುತ್ತಿರಲಿಲ್ಲ. ಆದುದರಿಂದ ಅಲ್ಲಾಹನ ಮತ್ತು ಅವನ ರಸೂಲರ ಕಡೆಯಿಂದ ಏನೆಲ್ಲ ಬಂದಿದೆಯೋ ಅವೆಲ್ಲವನ್ನೂ ಸ್ವೀಕರಿಸುವುದು ನಮ್ಮ ಪಾಲಿಗೆ ಕಡ್ಡಾಯ. ಅವುಗಳಲ್ಲಿರುವ ಯುಕ್ತಿಯು ನಮಗೆ ಅರ್ಥವಾದರೂ ಇಲ್ಲದಿದ್ದರೂ ಸಹ. "ಇದು ನನ್ನ ಬುದ್ಧಿಗೆ ಒಗ್ಗುವುದಿಲ್ಲ. ಇದನ್ನು ನಾನು ಸ್ವೀಕರಿಸುವುದಿಲ್ಲ" ಎಂದು ಹೇಳುವುದು ಮುಸಲ್ಮಾನನಿಗೆ ಯೋಗ್ಯವಾದುದಲ್ಲ. ಬದಲಾಗಿ ಮುಸಲ್ಮಾನನಿಗೆ ಕಡ್ಡಾಯವಾಗಿರುವುದು ಅಲ್ಲಾಹು ಮತ್ತು ಅವನ ರಸೂಲರ ಕಡೆಯಿಂದ ಏನೆಲ್ಲ ಬಂದಿದೆಯೋ ಅವೆಲ್ಲವನ್ನೂ ಮರುಮಾತಿಲ್ಲದೆ ಸ್ವೀಕರಿಸುವುದು. ಯುಕ್ತಿಯಿಲ್ಲದ ಯಾವುದೇ ವಿಷಯವನ್ನೂ ಅಲ್ಲಾಹು ಆಜ್ಞಾಪಿಸುವುದಿಲ್ಲ. ಒಂದು ವಿಷಯದಲ್ಲಿರುವ ಯುಕ್ತಿಯೇನೆಂದು ಗ್ರಹಿಸಲು ನಮಗೆ ಸಾಧ್ಯವಾಗದಿದ್ದರೆ ಆ ವಿಷಯದಲ್ಲಿ ಯುಕ್ತಿಯಿಲ್ಲವೆಂದು ಅರ್ಥವಲ್ಲ. ಅದರಲ್ಲಿರುವ ಯುಕ್ತಿ ನಮಗೆ ತಿಳಿದರೂ ತಿಳಿಯದಿದ್ದರೂ ಅವೆಲ್ಲವೂ ಅಲ್ಲಾಹನ ಕಡೆಯಿಂದ ಮತ್ತು ಅವನ ಪ್ರವಾದಿಯ ಕಡೆಯಿಂದ ಎಂಬ ವಿಶ್ವಾಸದಿಂದ ನಾವು ಅವುಗಳನ್ನು ಸ್ವೀಕರಿಸಬೇಕು. ಇದು ಈಮಾನ್‌ನ ಆವಶ್ಯಕತೆಯಾಗಿದೆ.

ಅಲ್ಲಾಹು ಹೇಳುತ್ತಾನೆ:

﴿ وَمَا كَانَ لِمُؤْمِنٍ وَلَا مُؤْمِنَةٍ إِذَا قَضَى ٱللَّهُ وَرَسُولُهُۥٓ أَمْرًا أَن يَكُونَ لَهُمُ ٱلْخِيَرَةُ مِنْ أَمْرِهِمْ ۗ وَمَن يَعْصِ ٱللَّهَ وَرَسُولَهُۥ فَقَدْ ضَلَّ ضَلَٰلًا مُّبِينًا ﴿٣٦﴾ ﴾[الأحزاب: ٣٦]

*"ಅಲ್ಲಾಹು ಮತ್ತು ಅವನ ರಸೂಲರು ಒಂದು ವಿಷಯವನ್ನು ತೀರ್ಮಾನಿಸಿದ ಬಳಿಕ, ವಿಶ್ವಾಸಿಗೋ ವಿಶ್ವಾಸಿನಿಗೋ ತಮ್ಮ ವಿಷಯದಲ್ಲಿ ಯಾವುದೇ ಸ್ವಾತಂತ್ರ್ಯವೂ ಇರತಕ್ಕದ್ದಲ್ಲ. ಅಲ್ಲಾಹು ಮತ್ತು ಅವನ ರಸೂಲರ ಆಜ್ಞೆಯನ್ನು ಉಲ್ಲಂಘಿಸುವವರು ಸ್ಪಷ್ಟವಾದ ದುರ್ಮಾರ್ಗದಲ್ಲಿ ಬೀಳುವರು."* [ಅಲ್‌ಅಹ್‌ಝಾಬ್ 36]

ಪ್ರವಾದಿ(ﷺ)ರವರು ಏನಾದರೂ ಆಜ್ಞಾಪಿಸಿದರೆ ಅದು ಅಲ್ಲಾಹು ಆಜ್ಞಾಪಿಸಿದಂತೆಯೇ ಆಗಿದೆ. ಅಲ್ಲಾಹು ಹೇಳುತ್ತಾನೆ:

﴿ مَّن يُطِعِ ٱلرَّسُولَ فَقَدْ أَطَاعَ ٱللَّهَ ۖ وَمَن تَوَلَّىٰ فَمَآ أَرْسَلْنَٰكَ عَلَيْهِمْ حَفِيظًا ﴿٨٠﴾ ﴾[النساء: ٨٠]

*"ರಸೂಲರನ್ನು ಅನುಸರಿಸಿದವನು ಅಲ್ಲಾಹನನ್ನು ಅನುಸರಿಸಿದನು. ಯಾರಾದರೂ ಅನುಸರಿಸದೆ ತಿರುಗಿಬಿಡುವುದಾದರೆ ಅಂತಹವರಿಗೆ ರಕ್ಷಕರಾಗಿ ನಾವು ತಮ್ಮನ್ನು ಕಳುಹಿಸಿಲ್ಲ."* [ಅನ್ನಿಸಾಅ್ 80]

ಅಲ್ಲಾಹು ಹೇಳುತ್ತಾನೆ:

﴿ وَمَآ أَرْسَلْنَا مِن رَّسُولٍ إِلَّا لِيُطَاعَ بِإِذْنِ ٱللَّهِ ۚ ﴾[النساء: ٦٤]

*"ಅಲ್ಲಾಹನ ಅಪ್ಪಣೆ ಪ್ರಕಾರ ಅನುಸರಿಸಲ್ಪಡಬೇಕು ಎನ್ನುವುದಕ್ಕೇ ವಿನಾ ನಾನು ಯಾವುದೇ ರಸೂಲರನ್ನೂ ಕಳುಹಿಸಿಲ್ಲ."* [ಅನ್ನಿಸಾಅ್ 64]

ಅಲ್ಲಾಹು ಹೇಳುತ್ತಾನೆ:

﴿ وَأَطِيعُوا۟ ٱلرَّسُولَ لَعَلَّكُمْ تُرْحَمُونَ ﴿٥٦﴾ ﴾[النور: ٥٦]

*"ನೀವು ರಸೂಲರನ್ನು ಅನುಸರಿಸಿರಿ. ನಿಮಗೆ ದಯೆ ಸಿಗುವುದಕ್ಕಾಗಿ."* [ಅನ್ನೂರ್ 56]

﴿ وَإِن تُطِيعُوهُ تَهْتَدُوا۟ ۚ ﴾[النور: ٥٤]

*"ನೀವು ಅವರನ್ನು ಅನುಸರಿಸಿದರೆ ನೀವು ಸನ್ಮಾರ್ಗದಲ್ಲಾಗುವಿರಿ."* [ಅನ್ನೂರ್ 54]

﴿ فَٱلَّذِينَ ءَامَنُوا۟ بِهِۦ وَعَزَّرُوهُ وَنَصَرُوهُ وَٱتَّبَعُوا۟ ٱلنُّورَ ٱلَّذِىٓ أُنزِلَ مَعَهُۥٓ ۙ أُو۟لَٰٓئِكَ هُمُ ٱلْمُفْلِحُونَ ﴿١٥٧﴾ ﴾[الأعراف: ١٥٧]

*"ಆದುದರಿಂದ ಅವರಲ್ಲಿ ವಿಶ್ವಾಸವಿಟ್ಟವರು, ಅವರಿಗೆ ಶಕ್ತಿ ನೀಡಿದವರು, ಅವರಿಗೆ ಸಹಾಯ ಮಾಡಿದವರು ಮತ್ತು ಅವರೊಂದಿಗೆ ಇಳಿಸಲಾದ ಬೆಳಕನ್ನು ಹಿಂಬಾಲಿಸಿದವರು, ಇಂತಹವರು ಪೂರ್ಣವಾಗಿ ಯಶಸ್ಸುಗಳಿಸುವರು."* [ಅಲ್‌ಅಅ್‌ರಾಫ್ 157]

ಆದುದರಿಂದ ಪ್ರವಾದಿ(ﷺ)ರವರ ಹದೀಸ್‌ಗಳನ್ನು ಗೌರವಿಸುವುದು ಕಡ್ಡಾಯವಾಗಿದೆ. ಜ್ಞಾನವೋ, ಭಯಭಕ್ತಿಯೋ ಇಲ್ಲದೆ ಅವುಗಳ ಬಗ್ಗೆ ಮಾತನಾಡುವುದು ನಿಷಿದ್ಧ. ಉಲಮಾಗಳಂತೆ ನಟಿಸುವ ಅನೇಕ ಜನರನ್ನು ನಾವಿಂದು ಕಾಣುತ್ತಿದ್ದೇವೆ. ಸುನ್ನತ್ತಿನ ಆವರಣಗೋಡೆಯನ್ನು ಜಿಗಿದು ಒಳ ಪ್ರವೇಶಿಸಿ ಯಾವುದೇ ಜ್ಞಾನವಿಲ್ಲದೆ ತಮ್ಮ ಸ್ವೇಚ್ಛೆಯ ಪ್ರಕಾರ ಇದು ಸಹೀಹ್ ಮತ್ತು ಇದು ದಈಫ್ ಎಂದು ಹೇಳುವುದು ಇವರಿಗೆ ಸುಲಭವಾಗಿ ಬಿಟ್ಟಿದೆ. ಇವರಿಗೆ ಹದೀಸಿನ ಬಗ್ಗೆ ಯಾವುದೇ ಜ್ಞಾನವಿಲ್ಲ. ಇದು ಹದೀಸ್ ಶಾಸ್ತ್ರವನ್ನು ಹದೀಸ್ ವಿದ್ವಾಂಸರ ಬಳಿ ಕಲಿತಿಲ್ಲ. ಇವರದ್ದು ಅಪಾಯಕಾರಿ ಪ್ರವೃತ್ತಿ.

ಇಮಾಂ ಅಹ್ಮದ್ ಇಬ್ನ್ ಹಂಬಲ್(ﷺ) ಹೇಳುತ್ತಾರೆ:

عَجِبْتُ لِقَوْمٍ عَرَفُوا الْإِسْنَادَ وَصِحَّتَهُ يَذْهَبُونَ إِلَى رَأْيِ سُفْيَانَ.

*"ಈ ಜನರನ್ನು ಕಾಣುವಾಗ ನನಗೆ ಆಶ್ಚರ್ಯವಾಗುತ್ತದೆ. ಇವರು ಹದೀಸಿನ ಸನದನ್ನು ಮತ್ತು ಹದೀಸ್ ಸಹೀಹ್ ಎನ್ನುವುದನ್ನು ಅರಿತ ಬಳಿಕವೂ ಸುಫ್ಯಾನ್ ಅಸ್ಸೌರಿಯವರ ಅಭಿಪ್ರಾಯವನ್ನು ಸ್ವೀಕರಿಸುತ್ತಿದ್ದಾರೆ."*

ಅರಿವು ಸಿಗುವುದು ಧರ್ಮದಲ್ಲಿ ದೃಢವಾಗಿ ಬೇರೂರಿರುವ ಉಲಮಾಗಳಿಂದ ಕಲಿಯುವ ಮೂಲಕವಾಗಿದೆಯೇ ಹೊರತು ಉಲಮಾ ವೇಷಧಾರಿಗಳಿಂದ ಕಲಿಯುವ ಮೂಲಕವಲ್ಲ. ನೀವು ಎಲ್ಲಿಂದ ಕಲಿತಿರಿ ಎಂದು ಅವರೊಡನೆ ಕೇಳಿದರೆ, ಇಂತಿಂತಹ ಒಂದು ಗ್ರಂಥದಿಂದ, ಅಥವಾ ಇಂತಿಂತಹ ಒಬ್ಬ ವಿದ್ವಾಂಸ ವೇಷಧಾರಿ ವ್ಯಕ್ತಿಯಿಂದ ಎನ್ನುವರು. ಧರ್ಮದ ಬಗ್ಗೆ ಇವರು ಹೇಳುವ ಮಾತುಗಳು ಅಲ್ಲಾಹು ಮತ್ತು ಅವನ ರಸೂಲರ ಬಗ್ಗೆ ಜ್ಞಾನರಹಿತವಾಗಿ ಮಾತನಾಡುವುದಾಗಿದೆ.

ಓ ಅಲ್ಲಾಹ್! ನಮಗೆ ಧರ್ಮದ ಬಗ್ಗೆ ಪಾಂಡಿತ್ಯವನ್ನು ನೀಡು. ನಮಗೆ ಪ್ರಯೋಜನವುಂಟಾಗುವ ವಿಷಯವನ್ನು ನಮಗೆ ಕಲಿಸು. ನಮಗೆ ಕಲಿಸಿದ ವಿಷಯಗಳಲ್ಲಿ ನಮಗೆ ಪ್ರಯೋಜನವನ್ನು ದಯಪಾಲಿಸು. ನಮ್ಮನ್ನು ಕ್ಷಮಿಸು ಮತ್ತು ನಮಗೆ ದಯೆ ತೋರು.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .

*********

IslamHouse.com